**ದಿನಾಂಕಃ22.07.2019 ರಂದು ಸಾಕ್ಷಿದಾರರು ಹಾಜರಿದ್ದು, ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ–ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಡಿ.ಜಿ.ಜಿ ವಕೀಲರಿಂದಃ–**

ಯಾವಾ ಯಾವ ಆಸ್ತಿಗಳ ಮೇಲೆ ಪ್ರಕರಣ ದಾಖಲಿಸಿದ್ದೀರಾ ಎಂದರೆ ಸಾಕ್ಷಿ ಸರ್ವೆ ನಂಬರ್ಃ368, 53/ಪಿ1 ಈ ಎರಡೂ ಆಸ್ತಿಗಳ ಮೇಲೆ ದಾವೆ ದಾಖಲಿಸಿದ್ದೇನೆ. ಎರಡೂ ಆಸ್ತಿಗಳು ಹೇಮದಳ ಗ್ರಾಮದಲ್ಲಿವೆ. ಸರ್ವೆ ನಂಬರ್ಃ 368 ಒಟ್ಟು 5 ಎಕರೆ 9 ಗುಂಟೆ ಇದೆ. ಸರ್ವೆ ನಂಬರ್ಃ368 ರ ಜಮೀನಿನ ಚೆಕ್ಕುಬಂದಿಃ– ಪೂರ್ವಕ್ಕೆ ಕರಿಹನುಮಪ್ಪನವರ ಜಮೀನು, ಪಶ್ಚಿಮಕ್ಕೆ ಬುಡದ ಭೀಮಣ್ಣನವರ ಜಮೀನು, ಉತ್ತರಕ್ಕೆ ಮಸ್ಕಲ್ ಗೋಮಾಳ, ದಕ್ಷಿಣಕ್ಕೆ ಖಾನಪ್ಪನವರ ಜಮೀನು ಇದೆ.

ಸರ್ವೆ ನಂಬರ್ಃ 53/ಪಿ1 ರ ಒಟ್ಟು ವಿಸ್ತೀರ್ಣ 39 ಗುಂಟೆ ಇದೆ. ನಾನು 5 ವರ್ಷದವನಿದ್ದಾಗ ನನಗೆ ಸುಮಾರಾಗಿ ಕಣ್ಣು ಕಾಣುತ್ತಿತ್ತು. ಈಗ 5 ವರ್ಷದಿಂದ ಈಚೆಗೆ ನನ್ನ ಸಂಪೂರ್ಣ

ಕಣ್ಣು ಕಾಣುವುದಿಲ್ಲ ಎಂದು ಹೇಳುತ್ತಾರೆ. ನನಗೆ ಕಣ್ಣು ಕಾಣದೇ ಇರುವುದರಿಂದ ಯಾವುದೇ ಉದ್ಯೋಗ ಮಾಡುವುದಿಲ್ಲ. ಈ ಜಮೀನುಗಳ ವ್ಯವಸಾಯ ನೀವು ಮಾಡುವುದಿಲ್ಲ ಎಂದರೆ ಸಾಕ್ಷಿ ನನ್ನ ಹೆಂಡತಿ ಕರೆದುಕೊಂಡು ಹೋಗುತ್ತಾರೆ. ನನ್ನ ಹೆಂಡತಿ ಕಡೆಯಿಂದ ಜಮೀನಿನ ವ್ಯವಸಾಯ ಮಾಡಿಸುತ್ತೇನೆ ಎಂದು ಹೇಳುತ್ತಾರೆ. ನಿಮಗೆ ಕಣ್ಣು ಕಾಣದೇ ಇರುವುದರಿಂದ ನೀವು ಈ ಎರಡೂ ಜಮೀನುಗಳನ್ನು ನೋಡಿಲ್ಲ ಎಂದರೆ ಸಾಕ್ಷಿ ನನ್ನ ಹೆಂಡತಿ ಮತ್ತು ಮಕ್ಕಳು ನೋಡಿ ನನಗೆ ಹೇಳುತ್ತಾರೆ ಎಂದು ಹೇಳುತ್ತಾರೆ. ನಾನು ನನ್ನ ಮನೆಯಲ್ಲಿ ಕುಳಿತುಕೊಂಡು ಹೂ ಕಟ್ಟುವ ಕಸುಬು ಮಾಡುತ್ತೇನೆ.

ದಾವಾ ಸ್ವತ್ತು ಐಟಂ ನಂಃ2 ರಲ್ಲಿ ಯಾರು ಉಳುಮೆ ಮಾಡುತ್ತಾರೆ ಎಂದು ಕೇಳಲಾಗಿ ಸಾಕ್ಷಿ 8–10 ವರ್ಷಗಳಿಂದ ಯಾರೂ ವ್ಯವಸಾಯ ಮಾಡುತ್ತಿಲ್ಲ, ಅಲ್ಲಿ ಸೀಮೆಜಾಲಿ ಗಿಡ ಬೆಳದಿವೆ ಎಂದು ಹೇಳುತ್ತಾರೆ. ಸದರಿ ಜಮೀನಿನ ಚೆಕ್ಕುಬಂದಿಃ– ಪೂರ್ವಕ್ಕೆ ಕೃಷ್ಣಾಚಾರಿಯವರ ಜಮೀನು, ಪಶ್ಚಿಮಕ್ಕೆ ನರಸಪ್ಪ ಮೇಷ್ಟ್ರು ರವರ ಜಮೀನು, ಉತ್ತರಕ್ಕೆ ದೊಡ್ಡಮ್ಮನವರ ಜಮೀನು, ದಕ್ಷಿಣಕ್ಕೆ ಡಂಕಪ್ಪನವರ ಜಮೀನು ಇದೆ. ದಾವಾ ಆಸ್ತಿಯ ಐಟಂ ನಂ.1 ರಲ್ಲಿ ಯಾರು ಉಳುಮೆ ಮಾಡುತ್ತಿದ್ದಾರೆ ಎಂದರೆ ಪ್ರತಿವಾದಿಗಳು ನನಗೆ ಗೊತ್ತಿಲ್ಲದೇ ನಿನ್ನೆ–ಮೊನ್ನೆ ನನ್ನ ಆಸ್ತಿಯಲ್ಲಿಯೂ ಸಹ ಉಳುಮೆ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ.

ನನ್ನ ತಾತನಾದ ಬುರುಜಿನ ಮಲ್ಲಪ್ಪನವರನ್ನು ನಾನು ನೋಡಿರುವುದಿಲ್ಲ. ಸದರಿ ನನ್ನ ತಾತನಿಗೆ ಇಬ್ಬರು ಹೆಂಡತಿಯರು. ಮೊದಲನೆ ಹೆಂಡತಿ ಹೆಸರು ತೋಪಮ್ಮ. ಎರಡನೇ ಹೆಂಡತಿ ಹೆಸರು ಕೆಂಚಮ್ಮ. ನನ್ನ ತಾತ ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಕೆಂಚಮ್ಮ ಮೊದಲನೆ ಹೆಂಡತಿ, ತೋಪಮ್ಮ 2 ನೇ ಹೆಂಡತಿ ಎಂದರೆ ಸರಿಯಲ್ಲ. ಕೆಂಚಮ್ಮನವರ ಮಗ ಸಣ್ಣ ಹನುಮಪ್ಪ ಎಂದರೆ ಸರಿಯಲ್ಲ. ಅವರು ತೋಪಮ್ಮನವರ ಮಗ ಎಂದು ಹೇಳುತ್ತಾರೆ. ಸಣ್ಣ ಹನುಮಪ್ಪನಿಗೆ ಮೂರು ಜನ ಮಕ್ಕಳು. ಅವರ ಹೆಸರು ಮೊದಲನೆಯವರು ಹನುಮಂತಪ್ಪ. 2 ನೇಯವರು ಸಿದ್ದಪ್ಪ, 3 ನೇಯವರು

ರಂಗಸ್ವಾಮಿ ಎಂದು ಹೇಳುತ್ತಾರೆ. ತೋಪಮ್ಮನವರಿಗೆ ಇಬ್ಬರು ಗಂಡು ಮಕ್ಕಳು. ಮೊದಲನೆಯವರು ಬಿ.ಕೆ.ತಿಪ್ಪೇಸ್ವಾಮಿ, 2 ನೇಯವರು ಬಿ.ಕೆ. ಹನುಮಂತಪ್ಪ.

ತೋಪಮ್ಮನವರಿಗೆ ಬುಡ್ಡಿಕೆಂಚಪ್ಪ, ಸಂಜೀವಪ್ಪ ಮತ್ತು ಓಬಣ್ಣ ಎಂಬ ಮೂರು ಜನ ಗಂಡು ಮಕ್ಕಳು ಎಂದರೆ ಸರಿಯಲ್ಲ. ಸದರಿಯವರು ಕೆಂಚಮ್ಮನವರ ಮಕ್ಕಳು ಎಂದು ಹೇಳುತ್ತಾರೆ. ನನ್ನ ತಂದೆಯ ಹೆಸರು ಓಬಣ್ಣ. ಓಬಣ್ಣ ಸಣ್ಣಮ್ಮನ ಮಕ್ಕಳು ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ಸಾಕ್ಷಿ, ಸಾಕ್ಷಿದಾರರು ಇದ್ದಾರೆ, ದಾಖಲೆ ಇಲ್ಲ ಎಂದು ಹೇಳುತ್ತಾರೆ. ಕೆಂಚಮ್ಮ ಯಾವಾಗ ತೀರಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ತೋಪಮ್ಮ ತೀರಿಕೊಂಡು 2–3 ವರ್ಷ ಆಗಿದೆ. ನಿಮ್ಮ ತಂದೆಗೆ ತೋಪಮ್ಮ ತಾಯಿ ಎಂದರೆ ಸರಿಯಲ್ಲ. ನನ್ನ ತಂದೆಯ ತಾಯಿ ಹೆಸರು ಕೆಂಚಮ್ಮ ಎಂದು ಹೇಳುತ್ತಾರೆ.

ನನ್ನ ತಂದೆಗೆ ಇಬ್ಬರು ಅಣ್ಣ–ತಮ್ಮಂದಿರು. ಅವರುಗಳೆಂದರೆ ಬುಡ್ಡಿ ಕೆಂಚಪ್ಪ ಮತ್ತು ಸಂಜೀವಪ್ಪ. ಬುಡ್ಡಿ ಕೆಂಚಪ್ಪ ಮತ್ತು ಅವನ ಹೆಂಡತಿ ತೋಪಮ್ಮ ಈಗ ಜೀವಂತವಾಗಿಲ್ಲ ಎಂದರೆ ಸರಿ. ಬುಡ್ಡಿಕೆಂಚಪ್ಪ ತೀರಿಕೊಂಡು 40 ವರ್ಷ ಮೇಲಾಗಿದೆ. ಅವರ ಹೆಂಡತಿ ತೋಪಮ್ಮ ತೀರಿಕೊಂಡು 3–4 ವರ್ಷಗಳಾಗಿವೆ. ಬುಡ್ಡಿಕೆಂಚಪ್ಪ ಮತ್ತು ಅವರ ಹೆಂಡತಿ ತೋಪಮ್ಮರವರಿಗೆ ಬಿ.ಕೆ. ತಿಪ್ಪೇಸ್ವಾಮಿ ಮತ್ತು ಬಿ.ಕೆ.ಹನುಮಂತಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಬಿ.ಕೆ.ತಿಪ್ಪೇಸ್ವಾಮಿ ತೀರಿಕೊಂಡು 2 ವರ್ಷ ಆಗಿದೆ. ಬಿ.ಕೆ.ತಿಪ್ಪೇಸಾಮಿಯವರ ಹೆಂಡತಿಯ ಹೆಸರು ಕೆಂಚಮ್ಮ ಎಂದರೆ ಸರಿ. ಸದರಿ ಬಿ.ಕೆ.ತಿಪ್ಪೇಸ್ವಾಮಿಗೆ ಸತೀಶ, ಆಶಾ ಮತ್ತು ಓಬಳೇಶ ಎಂದರೆ ಸರಿ. ಬಿ.ಕೆ.ತಿಪ್ಪೇಸ್ವಾಮಿಗೆ ಕೆಂಚಮ್ಮ ಬಿಟ್ಟರೆ ಬೇರೆ ಯಾರೂ ಹೆಂಡತಿ ಇಲ್ಲ ಎಂದರೆ ಸರಿಯಲ್ಲ. ಅವರಿಗೆ ಶಾರದಮ್ಮ ಎಂಬ ಮತ್ತೊಬ್ಬ ಹೆಂಡತಿ ಇದ್ದಾರೆ ಎಂದು ಹೇಳುತ್ತಾರೆ. ಶಾರದಮ್ಮ ಬಿ.ಕೆ.ತಿಪ್ಪೇಸ್ವಾಮಿಯವರ ವಿವಾಹವಾದ ಹೆಂಡತಿಯಲ್ಲ ಎಂದರೆ ಸರಿಯಲ್ಲ. ಅವರ ವಿವಾಹವಾಗಿದೆ, ಅವರಿಗೆ ಇಬ್ಬರು ಗಂಡು ಮಕ್ಕಳು ಇದ್ದಾರೆ ಎಂದು ಹೇಳುತ್ತಾರೆ. ಅವರ ಹೆಸರು ನನಗೆ ಗೊತ್ತಿಲ್ಲ. ಶಾರದಮ್ಮನಿಗೂ ಮತ್ತು ಬಿ.ಕೆ.ತಿಪ್ಪೇಸ್ವಾಮಿಗೂ ಯಾವುದೇ ಸಂಬಂಧ ಇಲ್ಲ, ಮತ್ತು

ಸದರಿ ಶಾರದಮ್ಮನಿಗೂ ಮತ್ತು ವಾದಿ ಪ್ರತಿವಾದಿಯರ ಕುಟುಂಬಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಕೆಂಚಮ್ಮನವರ ಮಗನಾದ ಸತೀಶ್‌ರವರಿಗೆ 20-22 ವರ್ಷ ವಯಸ್ಸು ಎಂದು ಹೇಳುತ್ತಾರೆ. ಆಶಾ ರವರಿಗೆ 23-24 ವರ್ಷ ವಯಸ್ಸು ಇರಬಹುದು ಎಂದು ಹೇಳುತ್ತಾರೆ. ಓಬಳೇಶರವರಿಗೆ 15-16 ವರ್ಷ ವಯಸ್ಸಾಗಿರಬಹುದು ಎಂದು ಹೇಳುತ್ತಾರೆ. ಈ ದಾವೆ ಹಾಕಿರುವ ವಿಚಾರ ಸದರಿ ಸತೀಶ, ಆಶಾ ಮತ್ತು ಓಬಳೇಶ್ ರವರಿಗೆ ತಿಳಿಸಿರುವುದಿಲ್ಲ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನಿಮಗೆ ತೊಂದರೆ ಇದೆಯಾ ಎಂದರೆ ಸಾಕ್ಷಿ ನನ್ನನ್ನು ಹೆದರಿಸುತ್ತಾರೆ, ನನ್ನ ಮೈಮೇಲೆ ಬರುತ್ತಾರೆ, ಆದ್ದರಿಂದ ನಾನು ಅವರಿಗೆ ಹೇಳಿಲ್ಲ ಮತ್ತು ಈ ದಾವೆಯಲ್ಲ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದು ಹೇಳುತ್ತಾರೆ.

ಬಿ.ಕೆ.ಹನುಮಂತಪ್ಪ ತೀರಿಕೊಂಡು 15-16 ವರ್ಷಗಳಾಗಿವೆ. ಸದರಿ ಬಿ.ಕೆ.ಹನುಮಂತಪ್ಪನವರಿಗೆ ಪುಟ್ಟೀರಮ್ಮ ಎಂಬ ಒಬ್ಬಳೇ ಹೆಂಡತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರ ಮತ್ತೊಬ್ಬ ಹೆಂಡತಿ ಹೆಸರು ಮಂಜಮ್ಮ ಎಂದು ಹೇಳುತ್ತಾರೆ. ಈ ಪ್ರಕರಣದಲ್ಲಿರುವ 7 ನೇ ಪ್ರತಿವಾದಿ ಬಿ.ಕೆ.ಹನುಮಂತಪ್ಪನವರಿಗೂ ಯಾವುದೇ ಸಂಬಂಧ ಇಲ್ಲ ಮತ್ತು ಈ ಕುಟುಂಬಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ಪುಟ್ಟೀರಮ್ಮನವರಿಗೆ ಸಿದ್ದೇಶ್ ಮತ್ತು ಅಂಜಲಿ ಎಂಬ ಇಬ್ಬರು ಮಕ್ಕಳು ಇದ್ದಾರೆ ಎಂದರೆ ಸರಿ. ಸಿದ್ದೇಶ್‌ನ ವಯಸ್ಸು 15-16 ಇರಬಹುದು. ಅಂಜಲಿಯವರಿಗೆ 10-12 ವರ್ಷ ವಯಸ್ಸು. ಈ ಇಬ್ಬರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇದೆಯಾ ಎಂದರೆ ಇಲ್ಲ ಎಂದು ಹೇಳುತ್ತಾರೆ.

ಓಬಣ್ಣನಿಗೆ ನಿಮ್ಮ ತಾಯಿ ಓಬಕ್ಕ ಒಬ್ಬಳೇ ಹೆಂಡತಿ. ನನ್ನ ತಂದೆ ಓಬಣ್ಣ ತೀರಿಕೊಂಡು 10 ವರ್ಷ ಆಗಿದೆ. ನನಗೆ ಕೆಂಚಮ್ಮ ಮತ್ತು ಗಂಗಮ್ಮ ಎಂಬ ಸಹೋದರಿಯರು ಇದ್ದಾರೆ ಎಂದರೆ ಸರಿ. ಕೆಂಚಮ್ಮನವರಿಗೆ 48 ವರ್ಷ ವಯಸ್ಸಾಗಿದೆ. ಗಂಗಮ್ಮನಿಗೆ 40-42 ವರ್ಷಗಳಾಗಿವೆ. ಈ ಪ್ರಕರಣ

ದಾಖಲಿಸುವಾಗ ಈ ವಿಚಾರ ಅವರಿಗೆ ಹೇಳಿಲ್ಲ. ಅವರನ್ನು ಈ ಪ್ರಕಣದಲ್ಲಿ ಪಕ್ಷಗಾರರನ್ನಾಗಿ ಮಾಡಲು ನನಗೆ ತೊಂದರೆ ಇರಲಿಲ್ಲ. ಈ ಪ್ರಕರಣದ ವಿಚಾರ ಅವರಿಗೆ ಗೊತ್ತಿದೆ.

**ಮುಂದುವರಿದ ಪಾಟೀ–ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಅವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.